
ಅಸ್ತವ್ಯಸ್ಥ ಯುನಿಫಾರ್ಮ್‌ಗಳ ತಲೆಯ ಮೇಲೆ ಬುಟ್ಟಿಯಂತೆ ಎದ್ದು ನಿಂತ, ಎಣ್ಣೆಯನ್ನೇ ಕಾಣದ ಕೆಂದು ಕೂದಲುಗಳ ರಾಶಿ, ಮುದುಕನಂತೆ ಚಟ್ಟಬಿದ್ದ ಗಲ್ಲಗಳು... ಕೈಯಲ್ಲಿ ಬೇಡಿಯಂತೆ ಹಾಕಿದ ಕಡಗ, ಕಿವಿಯಲ್ಲಿ ಹರಳಿನ ಓಲೆ, ಪಾದ ಬಿಟ್ಟು ಗೇಣೆತ್ತರದ ಪ್ಯಾಂಟು, ಬಾಯಲ್ಲಿ ಜಗಿಯುತ್ತಿರುವ ಬಬ್ಬಲ್ಗಮ್! ಅಬಾಬಾ...! ಮಗನ ಅವತಾರ ನೋಡಿ ಸಂದೀಪ ಕಕ್ಕಾಬಿಕ್ಕಿಯಾದ. ಬೆಳಿಗ್ಗೆ ಒಂದು ಲೆಕ್ಕಕ್ಕೆ ಶಿಸ್ತಿನಿಂದ ಇರುವಂತೆ ಕಾಣುತ್ತಿದ್ದನಾದರೂ, ಸಂಜೆಯ ಆತನ ಅವತಾರ ಲೆಕ್ಕಕ್ಕೇ ಸಿಗುತ್ತಿರಲಿಲ್ಲ. ಸಂದೀಪನ ಬಿಪಿ ಏರುತ್ತಲಿದ್ದಂತೆ ಚಹಾ ತನ್ನ ಬಿಪಿ ಕಳೆದುಕೊಂಡಿತ್ತು.

'ಲೇ! ಎಲ್ಲೆ ಹೋಗಿದ್ದಿ? ಸಾಲಿ ಬಿಟ್ಟು ಯಾವ ಹೊತ್ತಾತು? ಈಗನೋ ಬರೋದು' ಎಂದು ತಂದೆ ಗದರಿದರೆ ನೂರೆಂಟು ನೆಪಗಳನ್ನ ಹೇಳಿ ಜಾರಿಕೊಂಡ ತರುಣ. ಆರಿಹೋದ ಚಹಾವನ್ನೇ ಸಂದೀಪ ಹೀರುತ್ತಿದ್ದರೂ, ಅದು ದೇಹದ ಉಷ್ಣತೆಗೆ ಹೊಟ್ಟೆಯಲ್ಲೇ ಕುದಿಯುತ್ತ ತಂದೂರಿ ಚಹಾದ ವಿಶೇಷತೆಯನ್ನು ಪಡೆದಿತ್ತು. ಈಗ ಮಾತಿನ ಮಧ್ಯದಲ್ಲಿ ಚಹಾದ ಉಷ್ಣತೆ ಚೆಕ್ ಮಾಡಿ, ಮತ್ತೆ ಒಳ್ಳೆಯ ಸರ್ವಿಸ್ ಕೊಡುವ ತಾಳ್ಮೆ ಕೂಡ ಮಧುಗಿರಲಿಲ್ಲ. ತಾಯಿಯ ಕುಶಲೋಪರಿ ವಿಚಾರಿಸಿ ರೂಮಿನತ್ತ ನಡೆದ ಸಂದೀಪ, ಮುಖ ತೊಳೆದು ಹಾಗೇ ಹಾಸಿಗೆಗೆ ಒರಗಿ ಕಣ್ಮುಚ್ಚಿ ನಿದ್ರಾದೇವಿಯನ್ನ ಇನ್ನೇನು ಆಹ್ವಾನಿಸಬೇಕೆನ್ನುವಾಗ,

'ಸಂದೀಪಾ, ಸಂದೀಪಾ... ಮಲಗಿದ್ಯಾ? ಈಗಿನ ಹುಡುಗರಿಗೆ ಏನೂ ನೆನಪಿರಲ್ಲಾ! ಎಲ್ಲಾ ನಾವ ನೆನಪ ಮಾಡಬೇಕು! ನಾಳೆ ಸಜ್ಜನ ಶೆಟ್ರ ಮಗನ ಮದವಿ ಐತಿ. ನೆನಪೈತಿಲ್ಲ! ಹೋದ ವಾರನ ಗಂಡಾ– ಹೆಂಡತಿ ಕಾರ್ಡ ಕೊಟ್ಟ ಹೋಗ್ಯಾರಾ' ಎಂದು ಶಶಿಯಮ್ಮ ತಮ್ಮ ಜವಾಬ್ದಾರಿ ನಿಭಾಯಿಸಿದರು. ಶಶಿಯಮ್ಮನ ಮಾತು ಮುಗಿಯುತ್ತಿದ್ದಂತೆ, 'ಕರೆದರೂ ಕೇಳದೆ...' ಎಂದು ಮೊಬೈಲ್ ತನ್ನ ಅಳಲನ್ನು ತೋಡಿಕೊಳ್ಳಲು ಪ್ರಾರಂಭಿಸಿತು. ಮ್ಯಾನೇಜರ್ ಮಯಾಂಕ್ ಕಾಲಿಂಗ್ ಎಂದು ನೋಡುತ್ತಿದ್ದಂತೆ, ಸಂದೀಪನ ನಿದ್ದೆಯೆಲ್ಲ ಆವಿಯಾಗೇ ಬಿಟ್ಟಿತು.

'ರಾತ್ರಿ ಒಂಬತ್ತಕ್ಕೆ ಸಿ.ಇ.ಓ ಸರ್ ಝೂಮ್ ಮೀಟಿಂಗ್ ತಗೋತಿದಾರೆ ಸರ್. ವಿದೌಟ್ ಫೇಲ್ ಯು ಹ್ಯಾವ್ ಟು ಅಟೆಂಡ್' ಎಂದ ತಕ್ಷಣ ಹಾಸಿಗೆ ಕೊಡವಿ ಎದ್ದ ಸಂದೀಪ ಲ್ಯಾಪ್‌ಟಾಪು ಹಿಡಿದು ಕಂಪನಿಯ ಪ್ರಾಜೆಕ್ಟ ಚೆಕ್ ಮಾಡುತ್ತ ಕುಳಿತ.

ಅಡುಗೆ ಮನೆಯಿಂದ ರೊಟ್ಟಿ ಸಪ್ಪಳ ಕೇಳುವುದೇ ತಡ, ಓಡಿ ಬಂದಳು ಬಿಂದು.



'ಮಮ್ಮಿ ಮತ್ತ ರೊಟ್ಟಿ ತಿನ್ನಾಕ ನನ್ನ ಕಡೆ ಆಗಂಗಿಲ್ಲ ಬಿಡು. ದಿನಾ ರಾತ್ರಿ ಊಟಕ್ಕ ರೊಟ್ಟಿನ ಅಂದ್ರ ಹೆಂಗ? ಅಜ್ಜಿ ರೊಟ್ಟಿ ತಿಂದ್ರ ನಾವೂ ಅದನ್ನ ತಿನಬೇಕನ?' ಎಂದು ತಗಾದೆ ತೆಗೆದಳು.

'ಮಧು ಆ ಹುಡುಗಿನ ಯಾಕ ಗೋಳು ಹೊಯ್ ಕೊಂತಿ? ನನಗ ಎರಡ ರೊಟ್ಟಿ ಬಿಸಿವು ಮಾಡಿಕೊಟ್ಟು, ಉಳದವರಿಗೆ ಏನ ಬೇಕು ನೋಡು ಅದನ್ನ ಮಾಡಿಕೊಡು. ಪಾಪ! ಸಂದೀಪಗ ಏನ ಬೇಕು ನೋಡು? ಆಫೀಸಿನ ಕೆಲಸನ ಮುಗಿಯಂಗಿಲ್ಲ ಅವಗ' ಎಂಬ ಅಜ್ಜಿಯ ಮಾತಿನಿಂದ ಮತ್ತೆ ಪುಟಿದೆದ್ದ ಬಿಂದು, 'ಮಮ್ಮಿ ನನಗ ಊಟಕ್ಕ ಆಲೂ ಪರೋಟ ಮಾಡು' ಎಂದು ರಾಗ ತೆಗೆದಳು.

'ನನಗೇನು ಹತ್ತು ಕೈ ಅದಾವನ! ಎಲ್ಲಾರಿಗೂ ಒಂದೊಂದು ತರಾ ಅಡುಗಿ ಮಾಡೋದು ನನ್ ಕೈಲೆ ಆಗಂಗಿಲ್ಲ! ನನಗೂ ಸಾಲಿ ಕೆಲಸಾ ಬಾಳ ಅದಾವು' ಎಂದು ಮಧು ಎನ್ನುವುದೇ ತಡ,

'ಹೂನವಾ! ನಾನು ನಿನಗ ಭಾಳ ವಜ್ಜಿ ಆಗೇನಿ. ನಾ ಕೇಳೋದು ಎರಡ ಹೊತ್ತು ಎರಡು ಬಿಸೇವು ರೊಟ್ಟಿ. ಅದನ್ನ ಬಿಟ್ರ ಬ್ಯಾರೆ ಏನ ಕೇಳತೇನಿ? ನಿನಗ ಮಾಡಾಕ ಆಗಲಿಕ್ರ ಹೇಳು, ನಾನು ಉದಯನ ಹತ್ರ ಬೆಂಗಳೂರಿಗೆ ಹೋಗಿಬಿಡತೇನಿ. ವಯಸ್ಸಾದ ಮ್ಯಾಲೆ ಬಾಳದಿನಾ ಬದಕಿರಬಾದವ್ವಾ' ಎಂದು ಅತ್ತೆ ಬಾಯಿ ಮಾಡತೊಡಗಿದಾಗ ಮಧು,

'ಅಲ್ರಿ ನಾನು ನಿಮಗ ಏನು ಅಂದಿಲ್ಲ. ನನ್ನ ಮಗಳಿಗೆ ಹೇಳಿದೆ. ನನಗೂ ಈಗೀಗ ಸಾಲ್ಯಾಗ ನಿಂತ ಪಾಠ ಮಾಡೋದು, ಮನ್ಯಾಗೂ ನಿಂತ ಅಡುಗಿ ಮಾಡೋದು ಮಾಡಿ ಮಾಡಿ ಬೆನ್ನಿನ ನರಾ ಬಾವು ಬಂದೇತಿ. ರೆಸ್ಟ ಮಾಡ್ರಿ ಅಂತ ಡಾಕ್ಟ್ರ ಹೇಳ್ಯಾರ. ರೊಟ್ಟಿ ಮಾಡಾಕ ಸುಂದರಮ್ಮಗ ಅದಕ್ಕ ಹೇಳಿದ್ದೆ. ನೀವು ಹಗಲೆಲ್ಲ ರೊಟ್ಟಿ ಚಂದಂಗ ಬೇಯಸೇ ಇಲ್ಲಾ... ರೊಟ್ಟಿ ದಪ್ಪ ಆಗ್ಯಾವು ಅಂದು ಅಂದು ಅಕಿನೂ ಕೆಲಸಾನೂ ಬಿಟ್ಲು. ನಾನೂ ಒಬ್ಬಕೀ ಏನೇನಂತ ಮಾಡಲಿ' ಎಂದು ಮಧು ಮರುಮಾತನಾಡಿದಾಗ ಶಶಿಯಮ್ಮನಿಗೆ ತಾನು ಸೊಸೆಯಾಗಿ ಹೊಸದಾಗಿ ಮನೆಗೆ ಬಂದ ನೆನಪುಗಳು ಪುಂಖಾನುಪುಂಖವಾಗಿ ಹೊಮ್ಮತೊಡಗಿದವು.

'ನಮ್ಮತ್ತಿ ನಮಗ ನಸಕಿನ್ಯಾಗ ನಾಕಕ್ಕ ಎಬಸತಿದ್ಲು. ಎದ್ದು ಎರಡೆರಡು ಗಿದ್ನಾ ಹಿಟ್ಟಿಂದು ರೊಟ್ಟಿ ಬಡಕೊಂಡು ಹೊಲಕ ಹೋಗಿ ಬುತ್ತಿ ಕೊಟ್ಟು, ಮತ್ತ ಹೊಳಿಗೆ ಹೋಗಿ ಎರಡೆರಡು ಬುಟ್ಟಿ ಅರಬಿ ಒಕ್ಕೊಂಡು ಬಂದು ಮತ್ತ ಸಂಜಿ ಅಡುಗಿ ಮಾಡತಿದ್ವಿ. ಈಗಿನವರಿಗೆ ಒಗ್ಯಾಕ ಆಳು, ಬೆಳಗಾಕ ಆಳು... ಎಲ್ಲಾ ಇದ್ರೂ ಅಡಗಿ ಮಾಡಕೊಂಡ ತಿನ್ನಾಕ ಹರೇದ ವಯಸ್ಸಿನ್ಯಾಗ ಉಶ್ ಅಂತಾರಾ! ಈಗೀಗ ತವರ ಮನ್ಯಾಗ ಬಾಣೇತನಾನ ಅಷ್ಟ ಕಮ್ಮಿಗ ಮಾಡಿಕಳಸತಾರ. ಹಿಂದ ನಮಗೆಲ್ಲಾ ಒಂಬತ್ತ ತಿಂಗಳತನಾ ಹಾಲುತುಪ್ಪದಾಗ ಕೈ ತೊಳಸತಿದ್ರು. ಆರ ತಿಂಗಳಾ ಹೊರಸ ಬಿಟ್ಟು ಕೆಳಗ ಇಳಸತಿದ್ದಿಲ್ಲಾ. ಒಂದೊಂದ ಹಂಡೆ ಬಿಸಿ ಬಿಸಿ ನೀರು ಮುಂಜಾನೆ ಸಂಜೀಕ ಹಾಕತಿದ್ರು. ಅದಕ್ಕ ನಾವು ಇಲ್ಲಿತನಕಾ ಗಟ್ಟಿ ಮುಟ್ಟ ಅದೇವಿ. ಸಣ್ಣ ವಯಸ್ಸಿನ್ಯಾಗ ಸೊಂಟನಡಾ ಅನಕೊಂತ ಕುಂತರ ನಾಳೆ ಹೆಂಗ ಮಾಡತಾರ ಏನ!' ತನ್ನ ತವರನ್ನು ಗೇಲಿ ಮಾಡಿದ ಶಶಿಯಮ್ಮನ ಈ ಮಾತುಗಳು ಸುಪ್ತವಾಗಿ ಮಲಗಿದ್ದ ಮಧುವಿನ ಆತ್ಮಸಮ್ಮಾನವನ್ನು ಜಾಗೃತ ಗೊಳಿಸಿದವು. ಮಾತಿಗೆ ಮಾತು ಬೆಳೆಸಿದ ಮಧುವಿನ ಧ್ವನಿ ಸಂದೀಪನ ಕಿವಿಗೆ ತಲುಪುವುದು ತಡವಾಗಲಿಲ್ಲ. ಅತ್ತೆ–ಸೊಸೆಯ ವಾಗ್ವಾದದಲ್ಲಿ ಪಿತ್ತ ನೆತ್ತಿಗೇರಿದ ಸಂದೀಪ ಅರಿವಿಲ್ಲದೇ ಹೆಂಡತಿ ಮೇಲೆ ಕೈ ಎತ್ತೇಬಿಟ್ಟ. ರಣರಂಗವಾಗಿದ್ದ ಮನೆಯಲ್ಲಿ ತರುಣ ಯಾರಿಗೂ ಗಮನಕ್ಕೆ ಬಾರದಂತೆ ಹಾಗೇ ಹಿಂಬಾಗಿಲಿನಿಂದ ಜಾರಿಕೊಂಡಿದ್ದ. ಬಿಂದು ಬೆದರಿದ ಹರಿಣಿಯಂತೆ ಬೆಡ್ ರೂಮಿನ ಮೂಲೆ ಸೇರಿದ್ದಳು.

'ಯಾಕ್ರೀ! ಇನ್ನೂ ಝೂಮ್ ಮೀಟಿಂಗ್ ಅಟೆಂಡ್ ಆಗಿಲ್ಲ! ಸಾಯಬ್ರು ಬೈಯಾಕತ್ತಾರಾ. ಹರಿ ಅಪ್, ಜಾಯಿನ ದ ಮೀಟಿಂಗ್' ಎಂದು ಮ್ಯಾನೇಜರ್ ಪುನಃ ಕರೆ ಮಾಡಿದರು. ಅವಸರ ಅವಸರದಲ್ಲಿ ಲ್ಯಾಪಟಾಪು ಎತ್ತಿಕೊಂಡು ಕೋಣೆ ಸೇರಿದ ಸಂದೀಪ. ಬಿಂದುವಿಗೆ ರಾತ್ರಿ ಮತ್ತೆ ರೊಟ್ಟಿಯೇ ಗತಿಯಾಯಿತು. ಅತ್ತೆಗೆ ಊಟ ಕೊಟ್ಟು, ತನಗೆ ಊಟಕ್ಕೆ ಹಸಿವಿಲ್ಲವೆಂದು ಬಿಂದುವಿನೊಟ್ಟಿಗೆ ಮಂಚ ಏರಿದಳು ಮಧು. ಎಗ್ ರೈಸು ತಿಂದು, ಸಾಕೆನ್ನುವಷ್ಟು ಮೊಬೈಲ್ ಜೊತೆಗೆ ಸರಸವಾಡಿ ಬಂದ ತರುಣನ ಬಗ್ಗೆ ಯಾರ ಗಮನವೂ ಇಲ್ಲಾ. ಝೂಮ್ ಮೀಟಿಂಗಿನ ಉದ್ದಕ್ಕೂ ಮೇಲಧಿಕಾರಿಗಳ ಖಾರದ ಮಾತುಗಳನ್ನು ಜೀರ್ಣಿಸಿಕೊಳ್ಳಲಾಗದೇ ಅಸಿಡಿಟಿಯೆಂದು ಸಂದೀಪನು ಹಾಗೆಯೇ ಮಲಗಿಬಿಟ್ಟ! ಅಲ್ಲಿಗೆ ಅವರಿಬ್ಬರ ಆ ಒಂದು ದಿನದ ಸಂಬಳಕ್ಕೆ ಅವರಿಬ್ಬರೂ ಅರ್ಹರಾಗಿದ್ದರು.

ಮರುದಿನ ವಾರದ ರಜಾ ದಿನವಾದರೂ ಏನೂ ಮಜವಿರಲಿಲ್ಲ. ಯಾರ ಮೊಗದಲ್ಲೂ ನಗುವಿಲ್ಲ. ತರುಣ ಮಾತ್ರ ಮನೆ ತನಗೇನೂ ಸಂಬಂಧವಿಲ್ಲ ಎನ್ನುವಂತೆ ಬೆಳಗಿನ ತಿಂಡಿ ಮುಗಿಸಿ ಮತ್ತೆ ತನ್ನ ಗೆಳೆಯರ ಗುಂಪನ್ನು ಸೇರಲು, ಮಂಡಿಯ ಮೇಲೆ ಹರಿದ ಪ್ಯಾಂಟು ಹಾಕಿಕೊಂಡು, ಬಗೆ ಬಗೆಯ ಬಣ್ಣ ಬಳಿದುಕೊಂಡು ಹಾರಾಡುತ್ತಿದ್ದ ಕೂದಲುಗಳನ್ನು ತಿರುಗಿಸುತ್ತ, ಮೂರೆ ಮೂರು ಪೆಗ್ಗಿಗೆ... ಎಂದು ಹಾಡು ಗುನುಗುಡುತ್ತ, ಮೊಬೈಲ್ ಸರಸುತ್ತ ಗಾಡಿ ಹತ್ತಿಯೇಬಿಟ್ಟ. ಬರಲಾರದ ಲೆಕ್ಕಗಳೊಂದಿಗೆ ಬಸ್ಕಿ ಹೊಡೆಯುತ್ತ ಬಿಂದು ಬೇಸತ್ತು ತನ್ನ ಟೆಡ್ಡಿ ಬೇರ್‌ನೊಂದಿಗೆ ಮಾತನಾಡತೊಡಗಿದಳು. ಸಂದೀಪ ಮಧು ಮಾತಿಲ್ಲದೇ ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿದ್ದರು. ಬಿಂದುವಿನ ಟೆಡ್ಡಿ ಸ್ವಲ್ಪ ಹಳೆಯದಾಗಿತ್ತು. ಈಗ ಅವಳಿಗೆ ಹೊಸ ಟೆಡ್ಡಿಯ ಆಸೆಯಾಗಿತ್ತು. ಅಮ್ಮನಿಗೆ ಕೇಳಿದರೆ ಈಗ ಸಿಗುವುದು ದುರ್ಲಭ ಎಂಬುದು ಅವಳಿಗೆ ಖಾತ್ರಿ. ಆದರೂ ಅಮ್ಮನ ಲ್ಯಾಪಟಾಪ್ ಎತ್ತಿಕೊಂಡು ಆನ್ಲೈನ್ ಶಾಪಿಂಗ್‌ನಲ್ಲಿ ಹುಡುಕತೊಡಗಿದಳು. ಮನೆಯಲ್ಲಿ ವೈಫೈ ಎಲ್ಲರಿಗೂ ಧಾರಾಳವಾಗಿ ನೆಟ್ ಒದಗಿಸುತ್ತಿತ್ತು. ಒಂದು ಚಂದದ ಟೆಡ್ಡಿಯನ್ನು ಆರಿಸಿದ ಬಿಂದು ಆರ್ಡರ್ ಪ್ಲೇಸ್ ಮಾಡಲು ಮಧುವಿಗೆ ದುಂಬಾಲು ಬಿದ್ದಳು. ಹಿಂದಿನ ದಿನದ ಮಗಳ ಪರೋಟ ಆಸೆಗೆ ತಣ್ಣೀರೆರಚಿದ್ದ ಮಧುವಿಗೆ ಬಿಂದುವಿನ ಈ ಬಿಂದುವಿನಷ್ಟು ಆಸೆಯನ್ನೂ ತೀರಿಸದಿದ್ರೆ ತನ್ನ ತಾಯ್ತನಕ್ಕೆ ಅವಮಾನವೆಂದುಕೊಂಡು ಮಗಳಿಗೆ ಆರ್ಡರ್ ಮಾಡಲು ಹೇಳಿದಳೇನೋ ಸರಿ, ಆದರೆ ಕ್ಯಾಶ್ ಆನ್ ಡೆಲಿವರಿ ಆಯ್ಕೆ ಇರದೆ ಆನ್ಲೈನ್ ಪೇಮೆಂಟ್ ಮಾಡಿ ಮಗಳ ಖುಷಿಯನ್ನು ಮುಂಗಡವಾಗಿ ಕಾಯ್ದಿರಿಸುವಲ್ಲಿ ಯಶಸ್ವಿಯಾಗಿದ್ದಳು.

ತರುಣನ ಹತ್ತನೇ ತರಗತಿ ದಿನಗಳು ಕಾಲಿಗೆ ಬೆಂಕಿ ಕಟ್ಟಿದಂತೆ ಓಡುತ್ತಿದ್ದವು.